ಪೇಪರ್‌ಗೆ ಇಬ್ಬರೂ ಸಹಿ ಹಾಕಬೇಕು ಅಂತಾ ಹೇಳು.'

ಚೇಂಬರ್ ಒಳಗೆ ಬಂದ ಸದಾನಂದ ಸುಮತಿಯರನ್ನೊಮ್ಮೆ ನೋಡಿದ ಪೂಜಾರಿ. ಅವರ ಮುಖದಲ್ಲಿ ಯಾವುದೇ ಭಾವನೆ ಇರಲಿಲ್ಲ.

'ನಿಮ್ಮ ನಾದಿನಿಯ ಸಾವಿನ ಕಾರಣ ತಿಳಿಯಿತು. ಅವಳನ್ನು ಕಿಡ್ನಾಪ್ ಮಾಡಿ ಮಾರಲು ಯತ್ನಿಸಿದ್ದಾರೆ. ಅದು ಸಾಧ್ಯ ಆಗದಿದ್ದಾಗ ಕೊಲೆ ಮಾಡಿದ್ದಾರೆ...' ಗಂಭೀರನಾಗಿ ನುಡಿದ ಪೂಜಾರಿ.

'ಯಾರು ಸರ್ ಅವರು... ನೀವು ಹಿಡಿದಿರಾ ಅವರನ್ನು...' ಸುಮತಿ ಕೇಳಿದಳು. ಅವಳ ಧ್ವನಿಯಲ್ಲಿದ್ದ ಧಾವಂತ ಗುರುತಿಸಿದ ಪೂಜಾರಿ, 'ಈ ಬಾರಿ ನಿಮ್ಮ ನಾದಿನಿ ಕಳೆದು ಹೋಗಿದ್ದಾಳೆ ಅಂತಾ ಜಾಹೀರಾತು ನೀಡಿಲ್ಲವಾ ಸದಾನಂದ?' ಎಂದ.

ಅವನ ಮಾತು ಕೇಳಿ ಇಬ್ಬರೂ ಬೆಚ್ಚಿಬಿದ್ದರು.

'ಸರ್, ನೀವೇನು ಹೇಳುತ್ತಿದ್ದೀರೋ ನನಗರ್ಥ ಆಗುತ್ತಿಲ್ಲ. ನಮ್ಮ ಹುಡುಗಿಯ ಶವ ನೀಡಿದರೆ ಅವಳ ಅಂತಿಮ ಸಂಸ್ಕಾರ ಮಾಡಿ ನಮ್ಮ ಕರ್ತವ್ಯ ನಿಭಾಯಿಸುತ್ತೇವೆ.' ಬೇಸರದಿಂದ ನುಡಿದ ಸದಾನಂದ.

'ಮುಂದಿನ ಕಾರ್ಯಕ್ರಮ... ಅಂದರೆ... ಎಲ್ಲಿ ಇನ್ನಷ್ಟು ಹುಡುಗಿಯರು ಸಿಗುತ್ತಾರೆ ಅಂತಾ ಹುಡುಕುವುದಾ?'

ಅವನ ಮಾತುಗಳನ್ನು ಕೇಳಿ ಜಗದೀಶ ಕೂಡಾ ಆಶ್ಚರ್ಯಚಕಿತನಾದ.

'ಸಾಕು ನಿಮ್ಮಿಬ್ಬರ ನಾಟಕ... ಇಬ್ಬರೂ ಅದ್ಭುತವಾದ ನಾಟಕ ಆಡಿದಿರಿ. ನೀವು... ಸುಮತಿ... ಭೇಷ್! ನಿಮಗೆ ನಿಜವಾಗಿಯೂ ಪ್ರಶಸ್ತಿ ಕೊಡಬೇಕು... ಬೇರೆ ಬೇರೆ ರಾಜ್ಯಗಳಿಂದ ಸಣ್ಣ ವಯಸ್ಸಿನ ಹೆಣ್ಣು ಮಕ್ಕಳನ್ನು ಕೆಲಸ ಕೊಡಿಸುವ ಆಮಿಷ ತೋರಿಸಿ ಕರೆದುಕೊಂಡು ಬಂದು... ನಂತರ ಅವರ ಅಣ್ಣ ಅತ್ತಿಗೆ, ಅಕ್ಕ ಭಾವ, ಚಿಕ್ಕಮ್ಮ ಚಿಕ್ಕಪ್ಪ ಎಂದು ವೇಷ ಹಾಕಿ, ಅವರು ಕಳೆದು ಹೋಗಿದ್ದಾರೆಂದು ಬೇರೆ ಬೇರೆ ಪೊಲೀಸ್ ಸ್ಟೇಶನ್‌ಗಳಲ್ಲಿ ಕಂಪ್ಲೇಂಟ್ ಕೊಡುವುದು, ಅವರ ಬಗ್ಗೆ ಪೇಪರ್‌ನಲ್ಲಿ ಜಾಹೀರಾತನ್ನೂ ನೀಡಿ ಅದು ನಿಜವೇ ಎಂದು ಹುಡುಗಿಯ ತಂದೆ ತಾಯಿ ಹಾಗೂ ಇತರರಿಗೆ ನಂಬಿಸಿ ನಂತರ ಅದೇ ಹುಡುಗಿಯನ್ನು ಮಾರಾಟ ಮಾಡುವುದು ನಿಮ್ಮ ಪ್ಲಾನ್ ಅಲ್ಲವಾ?'

ಮೂರುದಿನದ ಹಿಂದೆ ತಮ್ಮ ನಾದಿನಿ ಕಾಣೆ ಆಗಿದ್ದಾಳೆ ಅಂತಾ ಅಳುತ್ತಾ ಬಂದಿದ್ದವರು ಇವರೇನಾ ಅಂತಾ ಅಲ್ಲಿದ್ದವರೆಲ್ಲಾ ಆಶ್ಚರ್ಯ ಪಟ್ಟರು.

'ಈ ಬಾರಿಯೂ ಅದೇರೀತಿ ಮಾಡಿ ತಪ್ಪಿಸಿಕೊಳ್ಳುವುದರಲ್ಲಿ ಇದ್ರಿ. ಆದರೆ, ಮಂಗಳಾ ಅದ್ಹೇಗೋ ನಿಮ್ಮಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಳು. ಹಾಗಾಗಿ ನೀವು ಅವಳ ಕೊಲೆ ಮಾಡಿ ಬಿಸಾಕಿದಿರಿ. ನಾನೂ ಈ ಕೇಸನ್ನು ಅಷ್ಟು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಆದರೆ ನೀವು ಮಾಡಿದ ಒಂದು ಸಣ್ಣ ತಪ್ಪಿನಿಂದ ನಾನು ಬೇರೆ ದಾರಿಯಲ್ಲಿ ಯೋಚಿಸುವಂತಾಯಿತು. ಅದು ಐದು ಲಕ್ಷ ರೂಪಾಯಿ ಕೊಡಿ ಅಂತಾ ಕಿಡ್ನಾಪರ್ ಫೋನ್ ಮಾಡಿದ್ದಾರೆ ಎಂದು ನೀವು ಹೇಳಿದ್ದು... ಅದರೊಂದಿಗೆ ಮಂಗಳಾ ತಂದೆ ತಾಯಿಯ ಕತೆ ಕಟ್ಟಿದ್ದು.

ನಿಮ್ಮ ಕತೆ ಕೇಳಿದಾಗಲೆಲ್ಲ ನನಗೆ ಎಲ್ಲೋ ಏನೋ ಸರಿ ಇಲ್ಲ ಅಂತಾ ಅನಿಸುತ್ತಿತ್ತು. ಕೂಡಲೇ ಎಲ್ಲಿಯೋ ನೋಡಿದ್ದ ಒಂದು ಜಾಹೀರಾತು ನೆನಪಿಗೆ ಬಂತು. ಬೇರೆ ಸ್ಟೇಶನ್‌ಗೆ ಯಾವುದೂ ಕೆಲಸಕ್ಕೆ ಹೋಗಿದ್ದಾಗ ನೋಡಿದ್ದೆ... ಅದರ ಬಗ್ಗೆ ಅಲ್ಲಿನ ಇನ್‌ಸ್ಪೆಕ್ಟರ್ ಬಳಿ ವಿಚಾರಿಸಿದ್ದೆ ಕೂಡಾ... ಮತ್ತೆ ಆ ಜಾಹೀರಾತನ್ನು ಚೆಕ್ ಮಾಡಿದರೆ ಅದರಲ್ಲಿದ್ದ ಮೊಬೈಲ್ ನಂಬರ್ ನಿಮ್ಮದೇ ಆಗಿತ್ತು.